# ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1122
2. ಮಾನ್ಯ ವಿಧಾನ ಪರಿಷತ್ತಿನ ಸದಸ್ಯರ ಹೆಸರು : ಶ್ರೀ ಪ್ರತಾಪ್ ಸಿಂಹ ನಾಯಕ್. ಕೆ (ವಿಧಾನ ಸಭೆಯಿಂದ ಚುನಾಯಿತರಾದವರು)
3. ಉತ್ತರಿಸುವ ದಿನಾಂಕ : 21.08.2025
4. ಉತ್ತರಿಸುವ ಸಚಿವರು : ಗೃಹ ಸಚಿವರು.

<table>
<tr><th>ಕ್ರ ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td>(ಅ)</td><td>ಸಾಂಸ್ಕೃತಿಕ ನಗರಿ ಮೈಸೂರಿನಲ್ಲಿ ಪೊಲೀಸ್ ಠಾಣೆಯಿಂದ ಕೂಗಳತೆ ದೂರದಲ್ಲಿಯೇ ಅಪಾರ ಪ್ರಮಾಣದಲ್ಲಿ ಮಾದಕ ವಸ್ತು ತಯಾರಿಸುವ ಘಟಕ ಪತ್ತೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;</td><td rowspan="3">ಬಂದಿರುತ್ತದೆ.<br><br>ಮುಂಬೈ ನಗರದ ಸಾಕಿನಾಕ ಪೊಲೀಸ್ ಠಾಣೆಯ ಮೊ.ನಂ. 296/2025 ಕಲಂ 8(ಸಿ), 22(ಸಿ), 29 ಎನ್.ಡಿ.ಪಿ.ಎಸ್ ಕಾಯ್ದೆ-1985 ಮತ್ತು ಕಲಂ 111 ಬಿ.ಎನ್.ಎಸ್. ಕಾಯ್ದೆ 2023 ರ ಪ್ರಕರಣದಲ್ಲಿ ದಸ್ತಗಿರಿಯಾಗಿದ್ದ ಮುಂಬೈ ನಿವಾಸಿಯಾದ ಆರೋಪಿ ಸಲೀಂ ಇಮ್ತಿಯಾಜ್ ಶೇಖ್, ವಯಸ್ಸು 47 ವರ್ಷ ಈತನು ನೀಡಿದ ಮಾಹಿತಿ ಮೇರೆಗೆ ಮೈಸೂರು ನಗರದಲ್ಲಿ ಮೊದಲ ಬಾರಿಗೆ ಜುಲೈ ಮೊದಲನೇ ವಾರದಲ್ಲಿ ಮಾದಕ ವಸ್ತು ತಯಾರಿಸುವ ಘಟಕವನ್ನು ಪ್ರಾರಂಭಿಸಿರುವುದಾಗಿ ತಿಳಿಸಿದ ಮೇರೆಗೆ, ಮುಂಬೈ ನಗರದ ಸಾಕಿನಾಕ ಪೊಲೀಸ್ ಠಾಣೆಯ ತನಿಖಾಧಿಕಾರಿಗಳು ಮೈಸೂರು ನಗರ ನರಸಿಂಹರಾಜ ಪೊಲೀಸ್ ಠಾಣೆಯ ಠಾಣಾಧಿಕಾರಿಗಳೊಂದಿಗೆ ದಿನಾಂಕ: 26/07/2025 ರಂದು ಜಂಟಿ ಕಾರ್ಯಾಚರಣೆ ನಡೆಸಿ ಮಾದಕ ವಸ್ತು ತಯಾರಿಸುವ ಘಟಕವನ್ನು ಪತ್ತೆ ಮಾಡಿ 04 ಜನ ಆರೋಪಿಗಳನ್ನು ದಸ್ತಗಿರಿ ಮಾಡಿರುತ್ತಾರೆ.</td></tr>
<tr><td>(ಆ)</td><td>ಬಂದಿದ್ದಲ್ಲಿ, ಪೊಲೀಸ್ ಠಾಣೆಯಿಂದ ಕೂಗಳತೆ ದೂರದಲ್ಲಿಯೇ ಇಷ್ಟು ದೊಡ್ಡ ಪ್ರಮಾಣದಲ್ಲಿ ಮಾದಕ ವಸ್ತು ತಯಾರಿಸುವ ಘಟಕ ಇದ್ದರೂ ಇದುವರೆಗೆ ಪತ್ತೆಯಾಗದಿರಲು ಹಾಗೂ ಇದುವರೆಗೆ ಯಾವುದೇ ಕಾರ್ಯಾಚರಣೆ ನಡೆಯದಿರಲು ಕಾರಣಗಳೇನು;</td></tr>
<tr><td>(ಇ)</td><td>ಮಾದಕ ವಸ್ತು ತಯಾರಿಕೆ ಜಾಲದ ಕಬಂಧಬಾಹು ಮಹಾರಾಷ್ಟ್ರದವರೆಗೂ ಹಬ್ಬಿರುವುದು ಕಂಡು ಬಂದಿದ್ದು, ಇದುವರೆಗೆ ಇದರಲ್ಲಿ ಭಾಗಿಯಾಗಿರುವ ಎಷ್ಟು ಜನ ಆರೋಪಿಗಳನ್ನು ಬಂಧಿಸಲಾಗಿದೆ;</td></tr>
<tr><td>(ಈ)</td><td>ಮಾದಕ ವಸ್ತು ನಿಯಂತ್ರಣ ಮತ್ತು ಪತ್ತೆಗೆ ಸರಕಾರ ಕೈಗೊಂಡಿರುವ ಕ್ರಮಗಳೇನು;</td><td>ಮೈಸೂರು ನಗರದಲ್ಲಿ ಕಳೆದ 3 ವರ್ಷಗಳಲ್ಲಿ ವರದಿಯಾಗಿರುವ ಪ್ರಕರಣಗಳ ಸಂಖ್ಯೆ, ಬಂಧಿಸಿರುವ ಆರೋಪಿಗಳು ಮತ್ತು ವಶಪಡಿಸಿಕೊಂಡಿರುವ ಮಾದಕ ವಸ್ತುಗಳ ಪ್ರಮಾಣ ಮತ್ತು ಅಂದಾಜು ಮೌಲ್ಯದ ವಿವರ ಈ ಕೆಳಕಂಡಂತಿದೆ:-<br><br><table><tr><th>Year</th><th>Reported</th><th>Accused</th><th>GANJA in KGs</th><th>SYNTHETIC DRUGS (Grams)</th><th>Value of the Drugs</th></tr><tr><td>2023</td><td>62</td><td>119</td><td>227.809</td><td>356.039</td><td>68,44,660</td></tr><tr><td>2024</td><td>43</td><td>81</td><td>379.312</td><td>143.85</td><td>1,02,45,050</td></tr><tr><td>2025</td><td>326</td><td>361</td><td>101.193</td><td>153.165</td><td>26,89,875</td></tr></table></td></tr>
</table>

**ರಾಜ್ಯದಲ್ಲಿ ಮಾದಕ ವಸ್ತು ನಿಯಂತ್ರಣ ಮತ್ತು ಪತ್ತೆಗೆ ಸರ್ಕಾರವು ತೆಗೆದುಕೊಂಡ ಕ್ರಮಗಳು ಈ ಕೆಳಕಂಡಂತಿದೆ:**

- ಸರ್ಕಾರವು **"ನಶಾ ಮುಕ್ತ ಭಾರತ"** ಅಭಿಯಾನದಡಿಯಲ್ಲಿ ಮಾದಕ ದ್ರವ್ಯ ಸೇವನೆಯ ದುಷ್ಪ ಪರಿಣಾಮಗಳ ಕುರಿತು ರಾಜ್ಯ ಮತ್ತು ಜಿಲ್ಲಾ ಮಟ್ಟದ ಸಮಿತಿಗಳು, ಇತರೆ ಇಲಾಖೆಗಳ ಸಹಯೋಗದೊಂದಿಗೆ ಅರಿವು, ನೆರವು ಮತ್ತು ಜಾಗೃತಿ ಕಾರ್ಯಗಾರಗಳನ್ನು ಹಮ್ಮಿಕೊಳ್ಳುತ್ತಿದೆ.
- ಮಾದಕ ವಸ್ತು ದುರುಪಯೋಗದ ಕುರಿತು ಸಾರ್ವಜನಿಕರಲ್ಲಿ ಅರಿವು ಮೂಡಿಸುವಲ್ಲಿ ಬಹಳಷ್ಟು ಕಾರ್ಯಕ್ರಮಗಳನ್ನು ಹಮ್ಮಿಕೊಂಡು, ಎಲ್ಲಾ ವರ್ಗದ ಜನಗಳಿಗೂ ಸಾಮಾಜಿಕ ಜಾಲತಾಣಗಳಾದ ಫೇಸ್‌ಬುಕ್, ವಾಟ್ಸ್‌ಆಪ್, ರೇಡಿಯೋ ಹಾಗೂ ಟ್ವೀಟರ್‌ಗಳ ಮೂಲಕ ಎಲ್ಲಾ ಮಾಧ್ಯಮಗಳ ಮುಖಾಂತರ ಸಹ ಸಾಮಾನ್ಯ ಜನರಿಗೆ ಅನುಕೂಲವಾಗುವ ರೀತಿಯಲ್ಲಿ ಅರಿವು ಮೂಡಿಸಲಾಗುತ್ತಿದೆ.
- ಪೊಲೀಸ್ ಅಧಿಕಾರಿ ಸಿಬ್ಬಂದಿಗಳು ಖುದ್ದಾಗಿ ಶಾಲಾ-ಕಾಲೇಜುಗಳಿಗೆ ಬೇಟಿ ನೀಡಿ ಮಾದಕ ವಸ್ತುಗಳ ದುರುಪ-ಯೋಗದ ಕುರಿತು ವಿದ್ಯರ್ಥಿಗಳಿಗೆ ಜಾಗೃತಿ ಮೂಡಿಸಲಾಗುತ್ತಿದೆ.
- Drugs Free Karnataka Mobile App ಅನ್ನು ಅಭಿವೃದ್ಧಿಪಡಿಸಿ ಸರ್ವಾಜನಿಕರಲ್ಲಿ ಹಾಗೂ ವಿದ್ಯಾರ್ಥಿಗಳಲ್ಲಿ ಅರಿವು ಮೂಡಿಸಿ ಮಾದಕವಸ್ತು ಬಳಕೆ, ಸಂಗ್ರಹಣೆ, ಸರಬರಾಜು ಮೇಲೆ ನಿಯಂತ್ರಣ ಸಾಧಿಸುವ ನಿಟ್ಟಿನಲ್ಲಿ ದಿಟ್ಟ ಕ್ರಮಕ್ಕೈಗೊಳ್ಳಲಾಗುತ್ತಿದೆ. ಸದರಿ App ಮುಖಾಂತರ ಸಾರ್ವಜನಿಕರು ನೇರವಾಗಿ ಪೊಲೀಸರಿಗೆ ಮಾಹಿತಿ ನೀಡಬಹುದಾಗಿರುತ್ತದೆ.
- ಪ್ರತಿ ವರ್ಷವು ಜೂನ್ 26 ರಂದು "ಡ್ರಗ್ಸ್ ದುರುಪಯೋಗ ಮತ್ತು ಅಕ್ರಮ ಸಾಗಣಿಕೆ ವಿರುದ್ಧ ಅಂತರ ರಾಷ್ಟ್ರೀಯ ದಿನಾಚರಣೆ" ಹಮ್ಮಿಕೊಳ್ಳಲಾಗುತ್ತಿದೆ. ಈ ಕಾರ್ಯಕ್ರಮದ ಭಾಗವಾಗಿ ಕಾಲೇಜು ವಿಧ್ಯಾರ್ಥಿಗಳಿಗೆ ಬೋಧನೆ / ಅರಿವು ಮೂಡಿಸುತ್ತಿದ್ದು, ಈ ಸಂಬಂಧ ದಿನ ಪತ್ರಿಕೆ, ಅಕಾಶವಾಣಿ, ದೂರದರ್ಶನ ಮತ್ತು ಸಾಮಾಜಿಕ ಮಾಧ್ಯಮಗಳಲ್ಲಿ ತಿಳುವಳಿಕೆ ನೀಡಲಾಗುತ್ತಿದೆ. ಮಾದಕ ವಸ್ತುಗಳ ಸೇವನೆ ಮತ್ತು ಮಾರಾಟ ವಿರುದ್ಧ ಪ್ರತಿಜ್ಞಾ ವಿಧಿ ಬೋಧಿಸಲಾಗುತ್ತಿದೆ.
- ಈ ಕಾರ್ಯಕ್ರಮದ ಅಂಗವಾಗಿ ವಿಶೇಷ ಕಾರ್ಯಕ್ರಮಗಳನ್ನು ರೂಪಿಸಿ ಈ ಕೆಳಕಂಡತೆ ಶಾಲಾ-ಕಾಲೇಜುಗಳ ವಿದ್ಯಾರ್ಥಿಗಳಿಗೆ ಬೋಧನೆ ನೀಡಲಾಗಿದೆ:

| ವರ್ಷ | ಶಾಲಾ-ಕಾಲೇಜುಗಳ ಸಂಖ್ಯೆ | ವಿದ್ಯಾರ್ಥಿಗಳ ಸಂಖ್ಯೆ |
|---|---|---|
| 2023 | 2049 | 3,95,253 |
| 2024 | 3602 | 5,50,000 |
| 2025 | 4000 | 6,00,000 |

- ಶಾಲಾ-ಕಾಲೇಜು ಸುತ್ತ-ಮುತ್ತಲಿನ ಪ್ರದೇಶಗಳಲ್ಲಿ

| | | |
|---|---|---|
| | | ➢ ಶಾಲಾ-ಕಾಲೇಜು ಸುತ್ತ-ಮುತ್ತಲಿನ ಪ್ರದೇಶಗಳಲ್ಲಿ ಮಾದಕ ದ್ರವ್ಯ ಮುಕ್ತ ಪ್ರದೇಶವನ್ನಾಗಿ ಮಾಡಲು ಡ್ರಗ್ಸ್ ಮಾರಾಟಗಾರರ ಮೇಲೆ ನಿಗಾವಹಿಸಿ ಪ್ರಕರಣ ದಾಖಲಿಸಲಾಗುತ್ತಿದೆ.<br>➢ ರಾಜ್ಯದಲ್ಲಿ ಮಾದಕ ವಸ್ತುಗಳ ನಿಯಂತ್ರಣ ಕುರಿತಂತೆ ಸರ್ಕಾರದ ಆದೇಶ ಸಂಖ್ಯೆ: ಹೆಚ್‌ಡಿ/141/ಪಿಒಪಿ/2025, ದಿನಾಂಕ: 02/08/2025 ರಲ್ಲಿ ಕಾನೂನು ಮತ್ತು ಸುವ್ಯವಸ್ಥೆ ಪೊಲೀಸ್ ಠಾಣೆಗಳಲ್ಲಿ ನಾರ್ಕೋಟಿಕ್ಸ್ ಸಂಬಂಧ ದಾಖಲಾಗುವ ಪ್ರಕರಣಗಳ ಮೇಲ್ವಿಚಾರಣೆಗಾಗಿ ಮಾದಕ ವಸ್ತುಗಳ ವಿರೋಧಿ ಕಾರ್ಯಪಡೆ (**Anti Narcotic Task Force**) ಘಟಕವನ್ನು ಹೆಚ್ಚುವರಿ ಪೊಲೀಸ್ ಮಹಾ ನಿರ್ದೇಶಕರ ನೇತೃತ್ವದಲ್ಲಿ ಸೃಜಿಸಲಾಗಿದೆ.<br>➢ ಮಾದಕ ಬೆಳೆಗಳ ಗುರುತಿಸುವಿಕೆ ಮತ್ತು ನಾಶ, ಅಕ್ರಮ ಮಾದಕ ವ್ಯಸನವನ್ನು ಪತ್ತೆಹಚ್ಚಲು ಮತ್ತು ನಿರ್ಮೂಲನೆ ಮಾಡಲು ರಾಜ್ಯಾದ್ಯಂತ ಪೊಲೀಸ್ ಸಿಬ್ಬಂದಿಗೆ NCB (ನಾರ್ಕೋಟಿಕ್ಸ್ ಕಂಟ್ರೋಲ್ ಬ್ಯೂರೋ) ಆನ್‌ಲೈನ್ ಕಾರ್ಯಾಗಾರಗಳ ಮೂಲಕ ತರಬೇತಿ ನೀಡಲಾಗುತ್ತಿದೆ. ಈ ಉದ್ದೇಶಕ್ಕಾಗಿ NCB ಮೊಬೈಲ್ ಅಪ್ಲಿಕೇಶನ್/ವೆಬ್ ಪೋರ್ಟಲ್ MAPDRUGS ಗೆ ಸಹ ಪರಿಚಯಿಸಲಾಗಿದೆ.<br>➢ ರಾಜ್ಯದ ಎಲ್ಲಾ ಶಾಲಾ-ಕಾಲೇಜುಗಳಲ್ಲಿ " ಮಾದಕ ವಸ್ತುಗಳ ವಿರೋಧಿ ಕಾರ್ಯ ಪಡೆ ಸಮಿತಿ" ರಚನೆ ಮಾಡವ ಕುರಿತು ಕಾಲೇಜು ಮತ್ತು ಶಿಕ್ಷಣ ಇಲಾಖೆಗೆ ಪತ್ರ ಬರೆಯಲಾಗಿದೆ. |
| (ಉ) | ಮಾದಕ ವಸ್ತು ಜಾಲ ಪತ್ತೆ ಮಾಡುವುದರ ಜೊತೆಗೆ ಅವರ ವಿರುದ್ಧ ಅತ್ಯಂತ ಕಠಿಣ ಕಾನೂನು ಕ್ರಮಗಳನ್ನು ಜರುಗಿಸಲು ಸರ್ಕಾರ ಈ ಕೂಡಲೇ ಕ್ರಮ ವಹಿಸಲಾಗುವುದೇ? | ಮೈಸೂರು ನಗರದಲ್ಲಿ ಮಾದಕ ವಸ್ತು ಜಾಲದಲ್ಲಿ ತೊಡಗಿದ್ದವರ ವಿರುದ್ಧ ಈ ಕೆಳಕಂಡಂತೆ ಪ್ರಕರಣಗಳಲ್ಲಿ ಕಠಿಣ ಕಾನೂನು ಕ್ರಮವನ್ನು ಜರುಗಿಸಲಾಗುತ್ತಿದೆ:-<br>❖ 02 ಪುನರಾವರ್ತಿತ ಆರೋಪಿಗಳ ವಿರುದ್ಧ PITNDPS- ಕಾಯ್ದೆ-1988ರ ರೀತ್ಯ ಪ್ರಸ್ತಾವನೆ ಸಲ್ಲಿಸಿದ್ದು, ಸದರಿ ಪ್ರಸ್ತಾವನೆಯು ಪರಿಶೀಲನೆಯಲ್ಲಿರುತ್ತದೆ.<br>❖ ಮೈಸೂರು ನಗರದಲ್ಲಿ ಮಾದಕ ವಸ್ತು ಜಾಲಗಳನ್ನು ಪತ್ತೆ ಮಾಡಿ ದಿನಾಂಕ: 06/08/2025 ರವರೆಗೆ ಒಟ್ಟು 304 ಪ್ರಕರಣಗಳನ್ನು ದಾಖಲಿಸಿ, ಆರೋಪಿಗಳ ವಿರುದ್ಧ ಕಾನೂನು ಕ್ರಮಕೈಗೊಳ್ಳಲಾಗುತ್ತಿದೆ. |

(ಡಾ: ಜಿ . ಪರಮೇಶ್ವರ)
ಗೃಹ ಸಚಿವರು

ಒಇ 48 ಪಿಎನ್‌ಡಿ 2025 (ಇ)